**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | | 20 (155) |
| **ಮಾನ್ಯ ಸದಸ್ಯರ ಹೆಸರು** | | ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸುವ ಸಚಿವರು** | | ಉನ್ನತ ಶಿಕ್ಷಣ ಸಚಿವರು |
| **ಉತ್ತರಿಸಬೇಕಾದ ದಿನಾಂಕ** | | 17.08.2026 |
| | **ಪ್ರಶ್ನೆ** | **ಉತ್ತರ** |
| ಅ) | ಕುವೆಂಪು ವಿಶ್ವವಿದ್ಯಾಲಯಕ್ಕೆ ಅರಣ್ಯ ಇಲಾಖೆಯಿಂದ ಒಟ್ಟು ಎಷ್ಟು ಎಕರೆ ಅರಣ್ಯ ಭೂಮಿಯನ್ನು ವರ್ಗಾಯಿಸಲಾಗಿದೆ; | ಕುವೆಂಪು ವಿಶ್ವವಿದ್ಯಾಲಯಕ್ಕೆ ಅರಣ್ಯ ಇಲಾಖೆಯಿಂದ ಒಟ್ಟು 230 ಎಕರೆ ಅರಣ್ಯ ಭೂಮಿಯನ್ನು ವರ್ಗಾಯಿಸಲಾಗಿದೆ. |
| ಆ) | ಅರಣ್ಯ ಭೂಮಿಯ ವರ್ಗಾವಣೆಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ನಿಯಮಗಳು ಹಾಗೂ ಷರತ್ತುಗಳ ಅನುಸಾರ ನೆಟ್ ಪ್ರೆಸೆಂಟ್ ವ್ಯಾಲ್ಯೂ (NPV) ಮತ್ತು ಇತರ ಕಡ್ಡಾಯ ಶುಲ್ಕಗಳ ರೂಪದಲ್ಲಿ ಪಾವತಿಸಬೇಕಾದ ಒಟ್ಟು ಮೊತ್ತ ಎಷ್ಟು; | ಅರಣ್ಯ ಭೂಮಿಯ ವರ್ಗಾವಣೆಗೆ ಸಂಬಂಧಿಸಿದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ ಪ್ರದೇಶ ಚಿಕ್ಕಮಗಳೂರು-ಇವರು ನೀಡಿರುವ ಡಿಮ್ಯಾಂಡ್ ನೋಟಿಸ್‌ನಲ್ಲಿ ಅರಣ್ಯೀಕರಣದ (Compensatory Afforestation) ವೆಚ್ಚ ರೂ.37,14,95.000/-ಗಳು, NPV(Net Present Value) ಮೊಬಲಗು ರೂ.14,34,93,437/-ಗಳು ಮತ್ತು ಅರಣ್ಯ ಇಲಾಖೆಯ ನಿಯಮಗಳ ಉಲ್ಲಂಘನೆಯ ದಂಡದ ಬಾಬ್ತು ರೂ.48,86,63,931/-ಗಳು ಸೇರಿದಂತೆ ಒಟ್ಟು ರೂ.1,00,36,52,388/-ಗಳನ್ನು ಪಾವತಿಸಲು ತಿಳಿಸಲಾಗಿರುತ್ತದೆ. |
| ಇ) | ಈವರೆಗೆ ಕುವೆಂಪು ವಿಶ್ವವಿದ್ಯಾಲಯ ಅಥವಾ ರಾಜ್ಯ ಸರ್ಕಾರದಿಂದ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ; ಪ್ರಸ್ತುತ ಬಾಕಿ ಉಳಿದಿರುವ ಮೊತ್ತ ಎಷ್ಟು; | ಕುವೆಂಪು ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಅರಣ್ಯ ಜಮೀನಿನ ಉಪಯೋಗಕ್ಕೆ ಸಂಬಂಧಿಸಿದಂತೆ NPV ಮೊತ್ತವನ್ನು ಸರ್ಕಾರದ ದಿನಾಂಕ:19.02.2019ರ ಆದೇಶದಲ್ಲಿ ರೂ.11.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ ಮತ್ತು ಸರ್ಕಾರದ ದಿನಾಂಕ: 31.10.2022ರ ಆದೇಶದಲ್ಲಿ ರೂ.3.32ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸರ್ಕಾರದಿಂದ ಅರಣ್ಯ ಭೂಪ್ರದೇಶ ಗುತ್ತಿಗೆ ನವೀಕರಣಕ್ಕಾಗಿ ಒಟ್ಟು ರೂ.14.32ಕೋಟಿಯಷ್ಟು ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>ಆದರೆ, ಅರಣ್ಯ ಇಲಾಖೆಗೆ ಗುತ್ತಿಗೆ ನವೀಕರಣ ಸಂಬಂಧ ವಿಶ್ವವಿದ್ಯಾಲಯ ಅಥವಾ ರಾಜ್ಯ ಸರ್ಕಾರವಾಗಲೀ ಯಾವುದೇ ಹಣವನ್ನು ಪಾವತಿಸಿರುವುದಿಲ್ಲ. |
| ಈ) | ಬಾಕಿ ಮೊತ್ತವನ್ನು ಪಾವತಿಸುವ ಕುರಿತು ಕೇಂದ್ರ ಸರ್ಕಾರದ ಸಂಬಂಧಿತ ಅರಣ್ಯ/ಪರಿಸರ ಇಲಾಖೆಯಿಂದ ಯಾವುದೇ ಬೇಡಿಕೆ ಪತ್ರ, ನೋಟೀಸ್ ಅಥವಾ ನಿರ್ದೇಶನ ಬಂದಿದೆಯೇ; ಬಂದಿದ್ದರೆ, ಅದರ ವಿವರವನ್ನು ನೀಡುವುದು; | ಈ ವಿಚಾರವಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು ಇವರು ದಿನಾಂಕ: 25.05.2026ರಂದು ವಿಶ್ವವಿದ್ಯಾಲಯಕ್ಕೆ ಬರೆದ ಪತ್ರದಲ್ಲಿ NPV (Net Present Value), CA (Compensatory Afforestation) ಮತ್ತು ದಂಡದ ಮೊತ್ತ ಸಹಿತ ಒಟ್ಟು ರೂ.1,00,36,52,388/-ಗಳನ್ನು ಪಾವತಿಸಲು ಡಿಮ್ಯಾಂಡ್ ನೋಟಿಸ್ ನೀಡಲಾಗಿರುತ್ತದೆ. |

| | | |
|---|---|---|
| ಉ) | ಪ್ರಸ್ತುತ ಸುಮಾರು ರೂ.100ಕೋಟಿಗೂ ಅಧಿಕವಾಗಿರುವ ಬಾಕಿ ಮೊತ್ತವನ್ನು ಪಾವತಿಸಲು ರಾಜ್ಯ ಸರ್ಕಾರವು ಯಾವುದೇ ನಿರ್ಧಾರ ಕೈಗೊಂಡಿದೆಯೇ; ಕೈಗೊಂಡಿದ್ದರೆ ಸಂಪೂರ್ಣ ವಿವರವನ್ನು ನೀಡುವುದು. | ಅರಣ್ಯ ಇಲಾಖೆಯಿಂದ ಕುವೆಂಪು ವಿಶ್ವವಿದ್ಯಾಲಯಕ್ಕೆ ಗುತ್ತಿಗೆ ಆಧಾರದಲ್ಲಿ ಮಂಜೂರಾಗಿರುವ ಒಟ್ಟು 89.92ಹೆಕ್ಟರ್ ಭೂಪ್ರದೇಶದ ಗುತ್ತಿಗೆ ಅವಧಿ ನವೀಕರಿಸುವ ಸಂಬಂಧ NPV (Net Present Value), CA (Compensatory Afforestation) ಒಟ್ಟು ಮೊತ್ತ ರೂ.85,86,52,388.00/- (ರೂ. ಎಂಬತ್ತೈದು ಕೋಟಿ ಎಂಬತ್ತಾರು ಲಕ್ಷದ ಐವತ್ತೆರಡು ಸಾವಿರದ ಮೂರು ನೂರ ಎಂಬತ್ತೆಂಟುಗಳು ಮಾತ್ರ) ಸರ್ಕಾರದಿಂದ ಅನುದಾನ ಭರಿಸಲು ಪ್ರಸ್ತಾವನೆಯನ್ನು ದಿನಾಂಕ: 18.06.2026ರಂದು ಪ್ರಸ್ತಾವನೆಯನ್ನು ವಿಶ್ವವಿದ್ಯಾಲಯದಿಂದ ಸಲ್ಲಿಸಲಾಗಿರುತ್ತದೆ.<br><br>ವಿಶ್ವವಿದ್ಯಾಲಯದಿಂದ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಸಲ್ಲಿಸಲಾದ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸಹಮತಿ ಅಭಿಪ್ರಾಯ ಕೋರಲಾಗಿದ್ದು, ಆರ್ಥಿಕ ಇಲಾಖೆಯು ದಿನಾಂಕ: 11.08.2026ರಂದು ನೀಡಿರುವ ಅಭಿಪ್ರಾಯದನ್ವಯ ಅರಣ್ಯ ಇಲಾಖೆ ಹಾಗೂ ಕುವೆಂಪು ವಿಶ್ವವಿದ್ಯಾಲಯದೊಂದಿಗೆ ಸಭೆ ನಡೆಸಿ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಒಟ್ಟು ಜಮೀನಿನಲ್ಲಿ ಅವಶ್ಯಕತೆ ಇಲ್ಲದ ಜಮೀನನ್ನು ಅರಣ್ಯ ಇಲಾಖೆಗೆ ಹಿಂದಿರುಗಿಸುವ ಕುರಿತು ಹಾಗೂ ಅರಣ್ಯ ಇಲಾಖೆಗೆ ಪಾವತಿಸಬೇಕಾದ NPV, CA ಮತ್ತು ದಂಡ ಶುಲ್ಕದ ಮೊತ್ತವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳು ಹಾಗೂ ಸ್ಥಿರ ಠೇವಣಿಗಳಿಂದ ಭರಿಸುವ ಸಾಧ್ಯತೆಗಳ ಬಗ್ಗೆ ಪರಿಶೀಲಿಸಿ ಸಂಪೂರ್ಣ ವಿವರಣೆಯೊಂದಿಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲು ತಿಳಿಸಿರುವುದರಿಂದ, ಆರ್ಥಿಕ ಇಲಾಖೆಯು ತಿಳಿಸಿರುವಂತೆ, ಉನ್ನತ ಶಿಕ್ಷಣ ಇಲಾಖೆಯು ಅರಣ್ಯ ಇಲಾಖೆ ಮತ್ತು ಕುವೆಂಪು ವಿಶ್ವವಿದ್ಯಾಲಯಗಳೊಂದಿಗೆ ಸಭೆ ನಡೆಸಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು, ಅರಣ್ಯ ಇಲಾಖೆಯಿಂದ NPV, CA ಮತ್ತು ದಂಡ ಶುಲ್ಕ ಸೇರಿ ಒಟ್ಟು ರೂ.100,36,52,388.00/-ಗಳನ್ನು ಪಾವತಿಸುವಂತೆ 'ಡಿಮ್ಯಾಂಡ್ ನೋಟ್' ನೀಡಿರುವುದನ್ನು ಮತ್ತೊಮ್ಮೆ ಮರುಪರಿಶೀಲಿಸಿ ಯಾವುದೇ ರೀತಿಯ ದಂಡವನ್ನು ವಿಧಿಸದೇ ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುವಂತೆ ಪಾವತಿಸಬೇಕಾದ ಮೊತ್ತವನ್ನು ಮರುನಿಗದಿಪಡಿಸಬೇಕೆಂದು ಕೋರಿ ಕುವೆಂಪು ವಿಶ್ವವಿದ್ಯಾಲಯದಿಂದ ದಿನಾಂಕ: 31.07.2026ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು ಇವರಿಗೆ ಪತ್ರ ಬರೆಯಲಾಗಿರುತ್ತದೆ. |
| ಊ) | ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಸಂಬಂಧಿತ ಸಚಿವಾಲಯಗಳೊಂದಿಗೆ ಸಮನ್ವಯ ಸಾಧಿಸಿ ಈ ಸಮಸ್ಯೆಯನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಲಿದೆ; ಯಾವ ಕಾಲಮಿತಿಯೊಳಗೆ ಈ ಸಮಸ್ಯೆಯನ್ನು ಪರಿಹರಿಸಲು ಉದ್ದೇಶಿಸಿದೆ? | |

**ಸಂಖ್ಯೆ**: ಇಡಿ 63 ಯುಎಸ್‌ವಿ 2026

**(ಬಸವರಾಜ ರಾಯರೆಡ್ಡಿ)**
ಉನ್ನತ ಶಿಕ್ಷಣ ಸಚಿವರು